**ಒಂದನೇ ಅಪರ ಸಿವಿಲ್ ನ್ಯಾಯಾಧೀಶರು ಮತ್ತು ಪ್ರ ದ ನ್ಯಾದಂ ನ್ಯಾಯಾಲಯ, ಮದ್ದೂರು.**

**<u>ಸಿಸಿ 6411 /2021</u>**

| | | | |
|---|---|---|---|
| **ಸಾಕ್ಷಿದಾರರ ಹೆಸರು** | - | ವಸಂತ ಸಿ | **ಚಾ.ಸಾ.-21** |
| **ತಂದೆಯ ಹೆಸರು** | - | ಚಂದ್ರಯ್ಯ | **ಪ್ರಾ.ಸಾ.-3** |
| **ವಯಸ್ಸು** | - | 43 ವರ್ಷ | |
| **ಉದ್ಯೋಗ** | - | ಡಿ ವೈ ಎಸ್ ಪಿ ಕರ್ನಾಟಕ ಲೋಕಾಯುಕ್ತ | |
| **ವಾಸಸ್ಥಳಃ** | - | ಬೆಂಗಳೂರು | |

ದಿನಾಂಕಃ 05.07.2025 ರಂದು ಪ್ರಮಾಣ ವಚನ ಬೋಧಿಸಲಾಯಿತು.

**<u>ಮುಂದುವರೆದ ಮುಖ್ಯ ವಿಚಾರಣೆಃ ಮಾನ್ಯ ಎ ಪಿ ಪಿ ರವರಿಂದ</u>**

ನಾನು ದಿನಾಂಕಃ 18.07.2019 ರಿಂದ 27.11.2020 ರವರೆಗೆ ಚನ್ನಪಟ್ಟಣ ಗ್ರಾಮಾಂತರ ವೃತ್ತ ನಿರೀಕ್ಷಕನಾಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ಮೊಕದ್ದಮೆ ಸಂಖ್ಯೆ 226/2019 ಕಲಂ 392 ಐ ಪಿ ಸಿ ಪ್ರಕರಣವು ದಿನಾಂಕಃ 18.12.2019 ರಂದು ದಾಖಲಾಗಿದ್ದು, ಅದೇ ದಿನ ಕೇಸಿನ ಕಡತವನ್ನು ಮುಂದಿನ ತನಿಖೆಗಾಗಿ ಚಾ.ಸಾ. ರವರಿಂದ ಪಡೆದುಕೊಂಡಿರುತ್ತೇನೆ. ದಿನಾಂಃ 04.01.2020 ರಂದು ರಾತ್ರಿ ಗಸ್ತಿನಲ್ಲಿದ್ದಾಗ ಬೆಳಗ್ಗಿನ ಜಾವ 05.00 ಗಂಟೆಯ ಸಮಯದಲ್ಲಿ ಚನ್ನಪಟ್ಟಣ ಗ್ರಾಮಾಂತರ ವ್ಯಾಪ್ತಿ ಕೋಲೂರು ರಸ್ತೆಯಲ್ಲಿ ಇಬ್ಬರು ಯುವಕರು ನಂಬರ್ ಪ್ಲೇಟ್ ಇಲ್ಲದ ಪಲ್ಸರ್ ವಾಹನದಲ್ಲಿ ಅನುಮಾನಾಸ್ಪದವಾಗಿ ಓಡಾಡುತ್ತಿದ್ದರು ಇಬ್ಬರನ್ನು ಬೆಳಗ್ಗೆ 05.00 ಗಂಟೆ ಸಮಯಕ್ಕೆ ವಶಕ್ಕೆ ಪಡೆದು ಬೆಳಗ್ಗೆ 06.00 ಗಂಟೆಗೆ ಚನ್ನಪಟ್ಟಣ ಗ್ರಾಮಾಂತರ ಪೋಲೀಸ್ ಠಾಣೆಗೆ ಕರೆದುಕೊಂಡು ಬಂದು ಕೂಲಂಕುಷವಾಗಿ ವಿಚಾರಣೆಗೆ ಒಳಪಡಿಸಿದಾಗ ಆರೋಪಿ 1 ವಿಷ್ಣು ಮತ್ತೊಬ್ಬ ಆರೋಪಿ ಆಕಾಶ ಎಂದು ತಿಳಿಸಿದ್ದು, ಸದರೀ ವ್ಯಕ್ತಿಗಳು ಹೈವೇ ರಸ್ತೆಗಳಲ್ಲಿ ಮೊಬೈಲ್ ಕಿತ್ತುಕೊಳ್ಳುವ ಹವ್ಯಾಸಉಳ್ಳವರಾಗಿದ್ದು, ಇದುವರೆಗೂ ಚನ್ನಪಟ್ಟಣ ಗ್ರಾಮಾಂತರ, ಚನ್ನಪಟ್ಟಣ ನಗರ, ರಾಮನಗರ ಮತ್ತು ಮದ್ದೂರು ವ್ಯಾಪ್ತಿಯಲ್ಲಿ ಸುಮಾರು 22 ಮೊಬೈಲ್ ಗಳನ್ನು ಕಿತ್ತುಕೊಂಡಿರುವುದಾಗಿ ತಿಳಿಸಿರುತ್ತಾರೆ. ಸದರೀ ಆರೋಪಿಗಳ ಸ್ವಇಚ್ಛಾ ಹೇಳಿಕೆಯನ್ನು ದಾಖಲಿಸಿಕೊಂಡಿರುತ್ತೇನೆ. ಸ್ವಇಚ್ಛಾ ಹೇಳಿಕೆಯಲ್ಲಿ ಅರೋಪಿಗಳು

ದಿನಾಂಕಃ 02.12.2019 ರಂದು ಕೆಸ್ತೂರು ಠಾಣಾ ವ್ಯಾಪ್ತಿ ಅರಣ್ಯಾಧಿಕಾರಿಗಳ ಕಛೇರಿ ಬಳಿ ತುಮಕೂರು ಮದ್ದೂರು ರಸ್ತೆಯಲ್ಲಿ ಒಂದು ಸ್ಯಾಮ್ ಸಂಗ್ ಮೊಬೈಲ್ ಕಿತ್ತುಕೊಂಡು ಹೋಗಿರುವುದಾಗಿ ತಿಳಿಸಿದ್ದು, ಸದರೀ ಮೊಬೈಲ್ ನ್ನು ಮದ್ದೂರಿನ ಜೆ ಕೆ ಟೆಲಿಕಾಂ ಅಂಗಡಿಗೆ ನೀಡಿರುವುದಾಗಿ ತಿಳಿಸಿರುತ್ತಾರೆ. ಅದೇ ದಿನ ಆರೋಪಿ ಬಳಿ ಇದ್ದ ಎರಡು ಮೊಬೈಲ್ ಹಾಗೂ ಕೃತ್ಯಕ್ಕೆ ಬಳಸಿದ್ದ ಪಲ್ಸರ್ ಎಂ ಎಸ್ 200 ದ್ವಿಚಕ್ರ ವಾಹನವನ್ನು ಪಂಚಾಯತುದಾರರಾದ ಚಾ.ಸಾ. 6 ಮತ್ತು 7 ರವರ ಸಮಕ್ಷಮ ಪಂಚನಾಮೆಯನ್ನು ಚನ್ನಪಟ್ಟಣ ಗ್ರಾಮಾಂತರ ಠಾಣೆಯಲ್ಲಿ ಬೆಳ್ಗೆ 11.00 ರಿಂದ 12.00 ಗಂಟೆಯವರೆಗೆ ಜರುಗಿಸಿರುತ್ತೇನೆ. ಸದರೀ ಪಂಚನಾಮೆ ಸಮಯದಲ್ಲಿ ಎರಡು ಮೊಬೈಲ್ ಹಾಗೂ ಪಲ್ಸರ್ ವಾಹನವನ್ನು ಠಾಣಾ ಮಾಲು ಪಟ್ಟಿ ಸಂಖ್ಯೆ 3/2020 ರಂತೆ ನಮೂದಿಸಿಕೊಂಡಿರುತ್ತೇನೆ. ಅದೇ ದಿನ ಆರೋಪಿ 1 ರವರನ್ನು ವಿಷ್ಣು ರವರನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿ, ದಿನಾಂಕಃ 04.01.2020 ರಿಂದ 13.01.2020 ಪೋಲೀಸ್ ಅಭಿರಕ್ಷೆಗೆ ಪಡೆದುಕೊಂಡಿರುತ್ತೇನೆ. ದಿನಾಂಕಃ 05.01.2020 ರಂದು ಆರೋಪಿ 1 ರ ಮುಂದುವರೆದ ಸ್ವಇಚ್ಛಾ ಹೇಳಿಕೆಯನ್ನು ಪಡೆದುಕೊಂಡಿರುತ್ತೇನೆ. ದಿನಾಂಕಃ 06.01.2020 ರಂದು ಮದ್ದೂರು ಟೌನ್ ಆರ್ ಆರ್ ನಗರ 8 ನೇ ಕ್ರಾಸ್ ಬಳಿ ಇರುವ ಜೆ ಕೆ ಟೆಲಿಕಾಂ ಅಂಗಡಿಯ ಬಳಿ ಪಂಚರಾದ ಚಾ.ಸಾ. 8 ರಿಂದ 10 ರವರನ್ನು ಬರಮಾಡಿಕೊಂಡು ಸದರೀ ವಿಷ್ಣು ಎಂಬ ಆರೋಪಿಯು ಜೆ ಕೆ ಮೊಬೈಲ್ ಅಂಗಡಿಗೆ 5 ಮೊಬೈಲ್ ಗಳನ್ನು ನೀಡಿರುವುದಾಗಿ ತಿಳಿಸಿದ್ದು, ಅಂಗಡಿಯವರು ಆರೋಪಿಯನ್ನು ನೋಡಿ ಗುರುತಿಸಿ, ಆರೋಪಿಯು ಮಾಲೀಕರಿಗೆ ನೀಡಿದ್ದ 5 ಮೊಬೈಲ್ ಗಳನ್ನು ಪಂಚರ ಸಮಕ್ಷಮ ಅಮಾನತ್ತುಪಡಿಸಿ, ಠಾಣಾ ಮಾಲು ಪಟ್ಟಿ ಸಂಖ್ಯೆ 5/2020 ರಲ್ಲಿ ನೋಂದಾಯಿಸಿಕೊಂಡಿರುತ್ತೇನೆ. ಸದರೀ 5/2020 ಪಂಚನಾಮೆಯ ಕಲಂ 5 ರ ಮೊಬೈಲ್ ಫೋನ್ ಕೆಸ್ತೂರು ಪೋಲೀಸ್ ಠಾಣೆಯ ಮೊಕದ್ದಮೆ ಸಂಖ್ಯೆ 9/2020 ಸಂಬಂಧಿಸಿದ್ದಾಗಿರುತ್ತದೆ. ದಿನಾಂಕಃ 13.01.2020 ರಂದು ಆರೋಪಿಯನ್ನು ಪೋಲೀಸರ ಬೆಂಗಾವಲಿನಲ್ಲಿ ಮಾನ್ಯ ನ್ಯಾಯಾಲಯಕ್ಕೆ ಹಾಜರುಪಡಿಸಿರುತ್ತೇನೆ. ದಿನಾಂಕಃ 22.01.2020 ರಂದು ಕೆಸ್ತೂರು ಪೋಲೀಸ್ ಠಾಣೆಗೆ ಇ ಮೇಲ್ ಮುಖಾಂತರ ಪ್ರಕರಣದ ವಿವರಗಳನ್ನು ಕಳುಹಿಸಿಕೊಟ್ಟಿರುತ್ತೇನೆ. ದಿನಾಂಕಃ 13.02.2020 ರಂದು ಮಾನ್ಯ ಸಿ ವಿಲ್ ನ್ಯಾಯಾಲಯ ಚನ್ನಪಟ್ಟಣರವರಿಗೆ ಪಿ ಎಫ್ 5/2020 ರ ಕಲಂ 5 ಸ್ಯಾಮ್ ಸಂಗ್ ಮೊಬೈಲ್ ನ್ನು ವಾರಸುದಾರರಿಗೆ ನೀಡಲು ಅನುಮತಿಯನ್ನು ಕೋರಿರುತ್ತೇನೆ. ದಿನಾಂಕಃ 17.02.2020 ರಂದು, ಚನ್ನಪಟ್ಟಣ ವೃತ್ತ ಕಛೇರಿಯಲ್ಲಿ ಪಂಚರಾದ ಚಾ.ಸಾ. 13 ಮತ್ತು 14 ರವರನ್ನು ಬರಮಾಡಿಕೊಂಡು ಸಂಜೆ 05.00 ರಿಂದ 05.45 ಗಂಟೆಯವರೆಗೆ ಮಹಜರ್ ಕ್ರಮ

ಜರುಗಿಸಿ, ಸ್ಯಾಮಸಂಗ್ ಎ -50 ಮೊಬೈಲ್ ನ್ನು ಮಾನ್ಯ ನ್ಯಾಯಾಲಯದ ಆದೇಶದಂತೆ ವಾರಸುದಾರರ ವಶಕ್ಕೆ ನೀಡಿರುತ್ತೇನೆ. ದಿನಾಂಕಃ 27.11.2020 ರಂದು ನನಗೆ ಬೆಂಗಳೂರು ನಗರಕ್ಕೆ ವರ್ಗಾವಣೆಯಾಗಿದ್ದು, ಕೇಸಿನ ಕಡತವನ್ನು ಚಾ.ಸಾ. 22 ರವರಿಗೆ ವಹಿಸಿಕೊಟ್ಟಿರುತ್ತೇನೆ. ದಿನಾಂಕಃ 04.01.02020 ರಂದು ಸಾಕ್ಷಿದಾರರಾದ ಚಾ.ಸಾ.1, 6 ರಿಂದ 10, 18 ಮತ್ತು 19 ರವರುಗಳ ಹೇಳಿಕೆಗಳನ್ನು ಪಡೆದುಕೊಂಡಿರುತ್ತೇನೆ.

ದಿನಾಂಕಃ 10.01.2020 ರ ಮಹಜರ್ ನ್ನು ನಿ.ಪಿ. 4 ಎಂದು ಮತ್ತು ಸಾಕ್ಷಿಯ ಸಹಿಯನ್ನು ನಿ.ಪಿ. 4(ಎ) ಎಂದು ಗುರುತಿಸಲಾಯಿತು. ದಿನಾಂಕಃ 17.02.2020 ರ ಮಹಜರ್ ನ್ನು ನಿ.ಪಿ. 5 ಎಂದು, ಸಹಿಯನ್ನು ನಿ.ಪಿ. 5(ಎ) ಎಂದು ಗುರುತಿಸಲಾಯಿತು. ದಿನಾಂಕಃ 06.01.2020 ರ ಅಮಾನತ್ತು ಮಹಜರ್ ನ್ನು ನಿ.ಪಿ. 6 ಎಂದು ಸಾಕ್ಷಿಯ ಸಹಿಯನ್ನು ನಿ.ಪಿ. 6(ಎ) ಎಂದು ಗುರುತಿಸಲಾಯಿತು. ದಿನಾಂಕಃ 04.01.2020 ರ ಮಹಜರ್ ನ್ನು ಹಾಜರುಪಡಿಸಿದ್ದು, ಅದನ್ನು ನಿ.ಪಿ. 7 ಎಂದು, ಸಾಕ್ಷಿಯ ಸಹಿಯನ್ನು ನಿ.ಪಿ. 7(ಎ) ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಕಾಲಾವಕಾಶ ಕೇಳಿದ್ದರಿಂದ ಕಾಲಾವಕಾಶ ನೀಡಲಾಯಿತು.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಗಿದೆ )

ಓ ಹೇ ಕೇ ಸರಿಯಾಗಿದೆಯೆಂದು ಒಪ್ಪಿರುತ್ತಾರೆ.

1 ನೇ ಅಪರ ಸಿವಿಲ್ ನ್ಯಾಯಾಧೀಶರು

ಸಾಕ್ಷಿ ಸಹಿ

ಮತ್ತು ಜೆ ಎಂ ಎಫ್ ಸಿ , ಮದ್ದೂರು.